OS 69 /2019 PW-2

**ದಿನಾಂಕಃ 26.03.2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ 2 ರಿಂದ 4 ನೇ ಪ್ರತಿವಾದಿ ಪರ ಶ್ರೀ ಎಸ್ ವಿ ಎಂ ವಕೀಲರಿಂದಃ**

1. ಮಹಲಿಂಗಪ್ಪನವರ ತಂದೆ ದಾಸಪ್ಪನವರನ್ನು ನಾನು ನೋಡಿರುತ್ತೇನೆ. ರಂಗಪ್ಪ ಮತ್ತು ದಾಸಪ್ಪ ಇಬ್ಬರು ಅಣ್ಣ ತಮ್ಮಂದಿರು. ಕೆಂಚಮ್ಮ ಒಬ್ಬಳೇ ಅಕ್ಕ. ಕೆಂಚಮ್ಮಳನ್ನು ಲಿಂಗಪ್ಪನವರಿಗೆ ಇದ್ದ ಊರಿನಲ್ಲೇ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. ಕೆಂಚಮ್ಮನಿಗೆ ನೀರಾವರಿ ಜಮೀನು ಇದ್ದು ಸ್ಥಿತಿವಂತರಾಗಿದ್ದಾರೆ ಎಂದರೆ ಸರಿ. ಕೆಂಚಮ್ಮ ಮತ್ತು ಲಿಂಗಪ್ಪನವರಿಗೆ ಮಕ್ಕಳು ಇಲ್ಲದೇ ಇರುವ ಕಾರಣ ಮಹಾಲಿಂಗಪ್ಪನವರನ್ನು ಸಾಕಿಕೊಂಡಿದ್ದರು ಎಂದರೆ ಅ ಬಗ್ಗೆ ನನಗೆ ಗೊತ್ತಿಲ್ಲ. ಎಲ್ಲರೂ ಒಟ್ಟು ಕುಟುಂಬದಲ್ಲಿದ್ದರು ಎಂದು ನುಡಿಯುತ್ತಾರೆ. ಅವರು ಒಟ್ಟು ಕುಟುಂಬದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

2. ಮಹಾಲಿಂಗಪ್ಪನವರು ಕಂಟ್ರಾಕ್ಟ್ ಕೆಲಸ ಮತ್ತು ಹುಣಸೇ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಸದರಿಯವರು ಛೇರ್ ಮೆನ್ ಆಗಿದ್ದರು ಎಂದರೆ ಸರಿ. ನಾನು ಅವರ ಜೊತೆ ಮೆಂಬರ್ ಆಗಿದ್ದೆ ಎಂದರೆ ಸರಿ. ಸದರಿಯವರು ತಬಲದ ಮೆಸ್ಟು ಆಗಿದ್ದರು ಎಂದರೆ ಸರಿ. ಸದರಿ ಎಲ್ಲಾ ಕೆಲಸದಿಂದ ಮಹಾಲಿಂಗಪ್ಪನವರಿಗೆ ಚೆನ್ನಾಗಿ ಆದಾಯ ಇತ್ತು ಎಂದರೆ ಹೌದು ಎಂದು ನುಡಿಯುತ್ತಾರೆ.

3. ಹನುಮಂತರಾಯಪ್ಪ ಮತ್ತು ಸರೋಜಮ್ಮನವರು ಮೊದಲಿನಿಂದಲೂ ಶಿರಾದಲ್ಲೇ ಇದ್ದರು ಎಂದರೆ ಸಾಕ್ಷಿಯು ಮೊದಲು 5-6 ವರ್ಷ ಬಂದಕುಂಟೆಯಲ್ಲಿದ್ದು , ಆ ನಂತರ ಶಿರಾದಲ್ಲಿ ಇದ್ದರು ಎಂದು ನುಡಿಯುತ್ತಾರೆ. ಸರೋಜಮ್ಮನವರು ಮದುವೆಯಾದ ನಂತರ ವಿದ್ಯಾಭ್ಯಾಸ ಮಾಡುತ್ತಿದ್ದು , ಶಿರಾ ಸಂತೇಪೇಟೆಯಲ್ಲಿ ಇರುವ ಅವರ ತಂದೆ ಮನೆಯಲ್ಲಿಯೇ ವಾಸವಾಗಿದ್ದರು ಎಂದರೆ ಸರಿ.

4. ದಾಸಪ್ಪನವರಿಗೆ ವಯಸ್ಸು ಆದ ಕಾರಣ ಅವರ ಹಿರಿಯ ಮಗ ಮನೆಯ ಯಜಮಾನಿಕೆ ಮಾಡುತ್ತಿದ್ದರು ಎಂದು ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಾಸಪ್ಪನ ಹಿರಿಯ ಮಗ ಯಾವತ್ತೂ ಮನೆಯ ಯಜಮಾನಿಕೆ ಮಾಡಿರಲಿಲ್ಲ

ಎಂದರೆ ಸರಿಯಲ್ಲ. ಅವರು ಚಿಕ್ಕವನಾಗಿದ್ದಗಿನಿಂದಲೂ ಅತ್ತೆ ಕೆಂಚಮ್ಮನವರ ಮನೆಯಲ್ಲಿದ್ದರು ಎಂದರೆ ಸಾಕ್ಷಿಯು ಕೆಂಚಮ್ಮನೇ ದಾಸಪ್ಪನ ಮನೆಯಲ್ಲಿದ್ದರು ಎಂದು ನುಡಿಯುತ್ತಾರೆ. ಕೆಂಚಮ್ಮನಿಗೆ ಸ್ವಂತ ಮನೆ ಮತ್ತು ಆಸ್ತಿ ಇದದ ಕಾರಣ ಅವರು ಯಾವತ್ತೂ ದಾಸಪ್ಪನ ಮನೆಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕ ಪಕ್ಕ ನನಗೆ ಜಮೀನು ಇಲ್ಲ ಎಂದರೆ ಸರಿ. ಸದರಿಯವರು ಯಾವತ್ತೂ ಒಟ್ಟು ಕುಟುಂಬದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈ ದಿನ ಸಾಕ್ಷ್ಯ ನುಡಿಯಲು ನನಗೆ ರಾಮಕೃಷ್ಣಯ್ಯ ಕರೆದುಕೊಂಡು ಬಂದಿರುತ್ತಾರೆ ಎಂದರೆ ಮೊದಲು ಹೌದು ಎಂದು ನಂತರ ಹನುಮಂತರಾಯಪ್ಪ ಕರೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಹನುಮಂತರಾಯಪ್ಪನವರು ಒಂದು ವಾರದ ಹಿಂದೆ ನಮ್ಮ ಮನೆಗೆ ಬಂದಿದ್ದರು. ಅದಕ್ಕೂ ಮೊದಲು ನಮ್ಮ ಮನೆಗೆ ಯಾವತ್ತೂ ಬಂದಿರಲಿಲ್ಲ.

5. ನನ್ನ ಹೆಂಡತಿಯ ಹೆಸರು ಜಯಮ್ಮ. ಜಯಮ್ಮನ ತಮ್ಮನ ಹೆಸರು ರಾಜಪ್ಪ ಎಂದರೆ ಸರಿ. ರಾಜಪ್ಪನಿಗೆ ರವಿ ಎಂಬ ಮಗ ಇದ್ದಾನೆ ಎಂದರೆ ಸರಿ. ಸದರಿ ರವಿಗೆ 6 ನೇ ಪ್ರತಿವಾದಿಯ ತಂಗಿಯನ್ನು ಮದುವೆ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ. ಆ ಕಾರಣಕ್ಕಾಗಿ ನಮಗೂ ಅವರಿಗೂ ವಿಶ್ವಾಸ ಎಂದರೆ ಸರಿ. ಸದರಿಯವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಾನು ಮತ್ತು ಮಹಾಲಿಂಗಪ್ಪನವರು ಜೊತೆಯಲ್ಲಿಯೇ ಹುಣಸೇ ಮರದ ಕೇಣಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ವಿಚಾರವಾಗಿ ನನಗೂ ಮತ್ತು ಮಹಾಲಿಂಗಪ್ಪನವರಿಗೆ ಜಗಳ ಆಗಿತ್ತು ಎಂದರೆ ಸರಿ. ಆ ಕಾರಣಕ್ಕಾಗಿ ನನಗೂ ಮಹಾಲಿಂಗಪ್ಪನಿಗೆ ವಿಶ್ವಾಸ ಸರಿಯಿಲ್ಲ ಎಂದರೆ ಸರಿಯಲ್ಲ.

7. 3 ನೇ ಪ್ರತಿವಾದಿ ನಾರಾಯಾಣಪ್ಪನಿಂದ ನನಗೆ ಸಾಲ ಕೊಡಿಸಿದ್ದರು ಎಂದರೆ ಸರಿ. 3 ನೇ ಪ್ರತಿವಾದಿ ಸದರಿ ಸಾಲಕ್ಕೆ ಜಾಮೀನುದಾರರಾಗಿದ್ದರು ಎಂದರೆ ಸರಿ. ಸದರಿ ನಾರಾಯಣಪ್ಪನವರ ಮಂಡಿಗೆ ಸರಕು ಹಾಕದೇ ಸಾಲವನ್ನು ತೀರಿಸದೇ ಇರುವ ಕಾರಣ , ನನಗೂ ಮತ್ತು ನಾರಾಯಣಪ್ಪನಿಗೂ ವಿಶ್ವಾಸ ಸರಿಯಿರಲಿಲ್ಲ ಎಂದರೆ ಸುಳ್ಳು. ಆ ಕಾರಣಕ್ಕಾಗಿ 3 ನೇ ಪ್ರತಿವಾದಿಗೆ ಸಾಲ ತೀರಿಸಬೇಕೆಂದು ಕೇಳಿರುತ್ತಾರೆ ಎಂದರೆ ಸಾಕ್ಷಿಯು

ನಾನು ಅಸಲು ಮತ್ತು ಬಡ್ಡಿ ಎಲ್ಲವನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಆ ಕಾರಣಕ್ಕಾಗಿ ನನಗೂ ಮತ್ತು 3 ನೇ ಪ್ರತಿವಾದಿಗೂ ಮನಸ್ತಾಪ ಇತ್ತು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನಾನು ಅವರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಹೆಚ್ ಡಬ್ಲೂ.ಎ ವಕೀಲರಿಂದಃ**

1. ದಾಸಪ್ಪನವರ ತಂದೆ ತಾಯಿಯನ್ನು ನೋಡಿರುತ್ತೇನೆ. ದಾಸಪ್ಪನಿಗೆ 3 ಜನ ಮಕ್ಕಳು. ಮಹಾಲಿಂಗಪ್ಪ , ರಂಗಪ್ಪ ಮತ್ತು ಹನುಮಂತರಾಯಪ್ಪ ಎಂಬ ಮಕ್ಕಳು. ದಾಸಪ್ಪನವರು ಮರಣಹೊಂದುವ ಮೊದಲು ಕೆಮ್ಮು ಇದ್ದು , ಅನಾರೋಗ್ಯದಿಂದ ಬಳಲುತ್ತಿದ್ದರು. ದಾಸಪ್ಪನವರ ಆರೋಗ್ಯ ಸರಿಯಿಲ್ಲದ ಕಾರಣ ಮನೆಯ ವ್ಯವಹಾರವನ್ನು ಮಹಾಲಿಂಗಪ್ಪನವರು ನೋಡಿಕೊಳ್ಳುತ್ತಿದ್ದರು. ಮಹಾಲಿಂಗಪ್ಪನವರು ಒಟ್ಟು ಕುಟುಂಬದ ಆಸಿರ್ ನೋಡಿಕೊಳ್ಳುವುದು ಬಿಟ್ಟರೇ ಬೇರೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ಮಹಾಲಿಂಗಪ್ಪನವರು ಕೆಲಸ ಮಾಡುತ್ತಿದ್ದರು , ವ್ಯಾಪಾರ ಮಾಡುತ್ತಿದ್ದರು ಛೇರ್ ಮೆನ್ ಆಗಿದ್ದರು ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ ಆದಾಯದಲ್ಲಿ ಸದರಿ ಎಲ್ಲಾ ಕೆಲಸ ಮಾಡುತ್ತಿದ್ದರು ಎಂದರೆ ಸರಿ.

2. ದಾಸಪ್ಪನವರು ಇದ್ದಾಗ ದಾವಾ ಜಮೀನುಗಳು ಒಟ್ಟು ಕುಟುಂಬದಲ್ಲೇ ಇದ್ದವು ಎಂದರೆ ಸರಿ. ದಾಸಪ್ಪನ ಮರಣಾ ನಂತರ ಅವರ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿರುವುದಿಲ್ಲ , ಒಟ್ಟು ಕುಟುಂಬದಲ್ಲಿಯೇ ಇದೆ ಎಂದು ನುಡಿಯುತ್ತಾರೆ. ಮಹಾಲಿಂಗಪ್ಪನವರು ಮರಣಹೊಂದುವವರೆಗೂ ಎಲ್ಲರೂ ಒಟ್ಟು ಕುಟುಂಬದಲ್ಲೇ ಇದ್ದರು. ಮಹಾಲಿಂಗಪ್ಪನ ಮರಣಾನಂತರ ರಂಗಪ್ಪನವರ ಮಕ್ಕಳು ಸಹ ಒಟ್ಟು ಕುಟುಬಂದಲ್ಲಿ ದಾವಾ ಆಸ್ತಿಗಳು ಅನುಭವಿಸುತ್ತಿದ್ದಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಸಿ ಎಂ ವಕೀಲರಿಂದಃ**

1. ಬಂದುಕುಂಟೆಯಲ್ಲಿರುವ ಜಮೀನುಗಳ ಸ.ನಂ. ಮತ್ತು ವಿಸ್ತೀರ್ಣ ಹೇಳಲು ಬರುವುದಿಲ್ಲ . ಬಂದುಕುಂಟೆ ಜಮೀನು , ಮೇಲ್ಲುಂಟೆ , ನಿಂಬೇಮರದಹಳ್ಳಿ ಮತ್ತು ಕೊಟ್ಟಗ್ರಾಮಗಳಲ್ಲಿರುವ ಜಮೀನು ಸದರಿಯವರ ಕುಟುಂಬಕ್ಕೆ ಹೇಗೆ ಬಂತು ಎಂದರೆ ಸಾಕ್ಷಿಯು ಒಟ್ಟು ಕುಟುಂಬದಲ್ಲಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಿಂಬೇಮರದಹಳ್ಳಿ

ಗ್ರಾಮದಲ್ಲಿರುವ ಜಮೀನು ಮಹಾಲಿಂಗಪ್ಪನವರಿಗೆ ಸಾಗುವಳಿ ಮೂಲಕ ಬಂದಿರುತ್ತದೆ. ಅದರ ಸ.ನಂ. ಮತ್ತು ವಿಸ್ತೀರ್ಣ ಗೊತ್ತಿಲ್ಲ. ನಿಂಬೇಮರದಹಳ್ಳಿ ಮಹಾಲಿಂಗಪ್ಪನವರ ಹೆಂಡತಿಯ ಊರು ಎಂದರೆ ಸರಿ. ಸದರಿ ನಿಂಬೇಮರದಹಳ್ಳಿ ಜಮೀನು ಐಟಂ ನಂ. 29 ಮಹಾಲಿಂಗಪ್ಪನವರಿಗೆ ಸರ್ಕಾರದಿಂದ ಮಂಜೂರಾದ ಜಮೀನು ಎಂದರೆ ಸರಿ. ಮಂಜೂರಾದ ನಂತರ ಮಹಾಲಿಂಗಪ್ಪನವರು ಖಾತೆ , ಪಹಣಿ ಬದಲಾಯಿಸಿಕೊಂಡು ಪ್ರತ್ಯೇಕವಾಗಿ ಅನುಭವಿಸುತ್ತಿದ್ದರು ಎಂದರೆ ಸರಿ. ಸದರಿ ಜಮೀನಿನಲ್ಲಿ 5 ಎಕರೆ ಜಮೀನನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಮೊಮ್ಮಗ ಎಂದು ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ಸದರಿ 5 ಎಕರೆ ಜಮೀನಿನಲ್ಲಿ 12 ನೇ ಪ್ರತಿವಾದಿಯು ಖಾತೆ , ಪಹಣಿ ಮಾಡಿಸಿಕೊಂಡು ಸ್ವಾಧೀನಾನುಭದಲ್ಲಿದ್ದಾರೆ ಎಂದರೆ ಇರಬಹುದು. 12 ನೇ ಪ್ರತಿವಾದಿ ಸದರಿ ಜಮೀನನ್ನು ಬ್ಯಾಂಕ್ ಗೆ ಅಡಮಾನ ಮಾಡಿ ಸಾಲ ಪಡೆದಿರುತ್ತಾರೆ ಎಂದರೆ ಆಬಗ್ಗೆ ಗೊತ್ತಿಲ್ಲ. ಸದರಿ 5 ಎಕರೆ ಜಮೀನನ್ನು ನಟರಾಜ್ ರವರೇ ಅನುಭವಿಸುತ್ತಿದ್ದಾರೆ ಎಂದರೆ ಸರಿ. ಮುಂದುವರೆದು ಲಕ್ಷ್ಮಕ್ಕನ ಮಗಳು , ಮಗ ಅನುಭವಿಸುತ್ತಿದ್ದಾರೆ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ಎಂದಿಗೂ ಒಟ್ಟು ಕುಟುಂಬದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.